ಬೇಜಾರೆಂದು ಹೊರಗೆ ಹೋಗಿ, ಹೊರಗೆ ಬೇಜಾರೆಂದು ಮನೆಗೆ ಮರಳಿ, ಏನೂ ತೋಚದೇ ಕಡೆಗೆ ಎರಡು ಮೂರು ಸಲ ಸಂಡಾಸಿಗೆ ಭೆಟ್ಟಿಯಿತ್ತು ಅಂತೂ ಹೇಗೋ ದಿನಗಳನ್ನು ಒದ್ದು ಒದ್ದು ಮುಂದೂಡುತ್ತಿದ್ದ. ಹಲವೊಮ್ಮೆ ರಾತ್ರಿಗಳಲ್ಲಿ ನಿದ್ದೆ ಸರಿಯಾಗಿ ಬಾರದೇ, ಸರಿಯಾಗಿ ಕನಸುಗಳೂ ಬೀಳದೇ ಎಚ್ಚರವಾಗೇ ಇದ್ದರೂ ಕನಸೊಳಗೆ ಎಚ್ಚರಾದೆನೆಂಬ ಭಾಸ. ರಾತ್ರಿ ಮುಗಿಯದು ಅನ್ನಿಸಿ, ಕಾಲ ನಿಂತುಬಿಟ್ಟಿದೆಯೆಂಬ ಅನುಮಾನದಲ್ಲಿ ಎರಡೂ ಕೈಯಿಂದ ರಾತ್ರಿಯನ್ನು ಮೊಗೆ ಮೊಗೆದು ಸುರುವಿ ದಣಿದು ಮುಂಜಾವಿನಲ್ಲಿ ನಿದ್ದೆ ಕವಿದರೆ ಒಮ್ಮೊಮ್ಮೆ ಮೊದಲ ಶಿಫ್ಟ್ ಶುರುವಾಗಿ ಒಂದು ಗಂಟೆಯ ನಂತರ ಏಳುತ್ತಿದ್ದ.

ಕೊನೆಗೂ ಒಂದು ದಿವಸ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದ ಹೊತ್ತಿನಲ್ಲಿ ಅವಳು ತಾನು ಬಸಿರಾದ ಬಗ್ಗೆ ರಾಮಚಂದ್ರನಿಗೆ ಹೇಳಿಬಿಟ್ಟಳು. ಅದಾದ ಮಾರನೇ ದಿನವೇ ಅವಳು ಬಚ್ಚಲಲ್ಲಿ ಬಿದ್ದದ್ದು.

## ಭಾಗ ಎರಡು

ಸಂಜೆ ಆರೂವರೆಗೆ ರಾಮಚಂದ್ರ ಆಸ್ಪತ್ರೆಗೆ ಬಂದ ನಂತರ ಸೀತಾರಾಮ ಊಟ ಮಾಡಿ ಬರುತ್ತೇನೆಂದು ಮನೆಗೆ ಹೋದ. ನಾಗತ್ತೆ ಜಾನಕಿ ಮೊದಲೇ ಹೋಗಿದ್ದರು. ರೇವತಿಗೆ ಪ್ರಜ್ಞೆ ಬಂದಿತ್ತು. ನಾಡಿದ್ದು ಡಿಸ್‌ಚಾರ್ಜ್ ಮಾಡಬಹುದೆಂದು ಡಾಕ್ಟರು ಹೇಳಿದ್ದರು. ರಾಮಚಂದ್ರ ಗೋಡೆಗೆ ಒರಗಿ ಸ್ಟೂಲಿನ ಮೇಲೆ ಕೂತಿದ್ದ. ಬಿಳೀ ಮಂಚ. ಬಿಳೀ ಬೆಡ್‌ಶೀಟ್, ಬಿಳಿ ಬಳಿದ ಗೋಡೆ – ಕಿಟಕಿ – ಬಾಗಿಲು; ಬಿಳೀ ಫ್ಯಾನ್. ಬಿಳಿಚಿಕೊಂಡು ಹಾಸಿಗೆಗಂಟಿರುವ ರೇವತಿ. ಆಸ್ಪತ್ರೆಯಲ್ಲಿ ರಾಮಚಂದ್ರನನ್ನ ಕಂಡದ್ದೇ ರೇವತಿ ಕ್ಷೀಣವಾಗಿ ಮುಗುಳ್ನಕ್ಕಳು. ಅವಳಿಗೆ ಗರ್ಭಪಾತ ಆದದ್ದು ಆಗಲೇ ರಾಮಚಂದ್ರನಿಗೆ ಖಾತ್ರಿಯಾಗಿಬಿಟ್ಟಿತು. ಆಮೇಲೇನೂ ರೇವತಿಯ ಜೊತೆ ಮಾತಾಡಲಿಲ್ಲ. ಸುಮ್ಮನೇ ಕೂತೇ ಇದ್ದ ಸ್ಟೂಲಿನ ಮೇಲೆ.

ಅವಳು ಬಾಯಿ ಅಲುಗಾಡಿಸಿದಂತಾಗಿ, 'ನೀರು ಬೇಕೇ' ಅಂದ. ಬೇಡವೆಂದು ತಲೆಯಲ್ಲಾಡಿಸಿದಳು. ಒಂದು ಕ್ಷಣ ಅವಳ ಬಗ್ಗೆ ಕರುಣೆಯಾಯಿತು. ಡಾಕ್ಟರು ಈಗಾಗಲೇ ಗರ್ಭಪಾತದ ಬಗ್ಗೆ ಸೀತಾರಾಮನಿಗೆ ಹೇಳಿರಬಹುದು. ಆತ ರೇವತಿಯನ್ನು ಈ ಬಗ್ಗೆ ಕೇಳಿಯೇ ಕೇಳುತ್ತಾನೆ. ಅವಳು ತನ್ನ ಹೆಸರು ಹೇಳಿದರೆ? ಮೆತ್ತಗೆ ಸರಿಯಾಗಿ ಕೇಳಿದರೆ ಸರಿ. ಜೋರುಮಾಡಿ ಕೇಳಿದರೆ 'ಹೌದೋ ಮಾಡಿದ್ದು ಖರೆ, ಅವಳಾಗಿ ಬಂದರೆ ಯಾವ ಗಂಡಸು ಬಿಡುತ್ತಾನೆ' ಅನ್ನುವುದು. ಅಂತೂ ಆ ಬೋಳಿಗೊಂದು ತನ್ನ ತಾಕತ್ತು ಗೊತ್ತಾಗುತ್ತದಲ್ಲವೇ? ಮನೆಯಿಂದ ಹೊರಗೆ ಹೋಗು ಅಂದರೆ ಹೋಗುವುದು. ಮನೆ ಬಿಟ್ಟ ಮೇಲೆ ತಾನು ಡಂಗೂರ ಸಾರುತ್ತೇನೋ ಇಲ್ಲವೋ ಎಂಬಷ್ಟು ಬುದ್ಧಿ ಇಲ್ಲವೇ ಅವರಿಗೇ? ಅಥವಾ ಮದುವೆಯಾಗು ಅಂದರೆ? ಒಲ್ಲೆನೆನ್ನುವುದು.

ನಾಗತ್ತೆ ಆ ದಿನ 'ನೀರಿಲ್ಲದವರು' ಎಂದು ಹಂಗಿಸಿದಾಗ ತಾನು 'ತೋರಿಸುತ್ತೇನೆ ನಿನಗೆ' ಅಂದಿದ್ದ. ಆಗಲೇ ಈ ಎಲ್ಲವೂ ಒಳಗೆ ತಯಾರಾಗಿ ನಿಂತಿತ್ತೆ ಎಂಬ ಅನುಮಾನ ಈಗ. ಹಾಗೆ ನೋಡಿದರೆ ರೇವತಿಯನ್ನು ಕಂಡರೆ ಕಾಮದಂಥ ಯಾವ ಭಾವನೆಗಳೂ ಹುಟ್ಟುತ್ತಲೇ ಇರಲಿಲ್ಲ. ನಿದ್ದೆ ಬಾರದ ರಾತ್ರಿಗಳಂದು ಕನಸುವ ಹುಡುಗಿಯರ ಸಾಲಿನಲ್ಲಿ ರೇವತಿಯ ಹೆಸರು ಎಂದೂ ಇದ್ದಿಲ್ಲ. ತನ್ನ ಗಂಡಸುತನದ ಬಗ್ಗೆ ತನಗೇ ಅನುಮಾನವೇ, ಅದನ್ನ ಸಾಬೀತು ಪಡಿಸಲು ಅವಳ